

ಐದು ರೂಪಾಯಿಗೆ ಹೊಟ್ಟೆ ತುಂಬ ಊಟ. ವಿದ್ಯಾರ್ಥಿನಿಯರಿಗೆ ಕೇವಲ ಎರಡು ರೂಪಾಯಿ!

# ಗದಗದಲ್ಲಿ ಹೀಗೊಂದು ಅನ್ನಭಾಗ್ಯ

■ ದಿಲ್

ಗದಗದಲ್ಲಿ ಸದ್ದಿಲ್ಲದೇ ಅನ್ನಭಾಗ್ಯ ಯೋಜನೆಯೊಂದು ನಡೆಯುತ್ತಿದೆ. ಐದು ರೂಪಾಯಿಗೆ ಹೊಟ್ಟೆತುಂಬ ಊಟ ಉಣಬಡಿಸುವ ಕಲ್ಪನೆ ಇದು. ಬಡವರು, ನಿರ್ಗತಿಕರು ಎನ್ನುವ ಯಾವ ತಾರತಮ್ಯ ಇಲ್ಲದೆ ಹಸಿದವರಿಗೆ ಅನ್ನ ಎನ್ನುವ ಸರಳ ಫಿಲಾಸಫಿ ಇಲ್ಲೀಗ ನೆಲೆಗೊಂಡಿದೆ.

ಸಮಾನಮನಸ್ಕರು ಸೇರಿ ಅನ್ನಪೂರ್ಣೇಶ್ವರಿ ಪ್ರಸಾದ ನಿಲಯ ರೂಪಿಸಿಕೊಂಡು ಇಂಥದೊಂದು ಸೇವೆಗೆ ನಿಂತಿದ್ದಾರೆ. ಅನ್ನ ಒಂದು ದೊಡ್ಡ ವ್ಯಾಪಾರ ಆಗಿರುವ ಜಮಾನಾ ಇದು. ಈಗ ಎಲ್ಲೆಂದರಲ್ಲಿ ರೆಸ್ಟೋರೆಂಟ್‌ಗಳು, ಹೋಟೇಲ್, ಟಿಫನ್ ಸೆಂಟರ್, ಮೆಸ್, ದರ್ಶಿನಿಗಳು. ಇಲ್ಲೆಲ್ಲ ಸೇವೆ ಒಂದು ಟ್ಯಾಗ್‌ಲೈನ್ ಅಷ್ಟೇ. ಅನ್ನ ಬಿಕರಿಯಾಗುವುದೇ ಹೆಚ್ಚು. ಇಂಥ ಬಿಕರಿ ಮನೋಭಾವದಿಂದಾಗಿಯೇ ಅನ್ನ ದುಬಾರಿ ಆಗಿದೆ. ಅಷ್ಟೇ ಅಲ್ಲ ಆರ್ಥಿಕ ಶಕ್ತಿ ಹೊಂದಿದವರಿಗಷ್ಟೇ ಕೈಗೆಟುಕುವಂತಾಗಿದೆ. ಅನ್ನ ಬೆಳೆಯುವ ರೈತ, ದುಡಿಯುವ ಕಾರ್ಮಿಕರು ಹಸಿವಿನಿಂದಲೇ ಆತ್ಮಹತ್ಯೆ ಮಾರ್ಗ ಹಿಡಿಯುತ್ತಿದ್ದಾರೆ!

ಇಂಥ ವಿಪರ್ಯಾಸಕ್ಕೆ ಸಣ್ಣ ಪರಿಹಾರ ಕಂಡುಕೊಳ್ಳಲು ನಡೆಸಿದ ಹುಡುಕಾಟದಲ್ಲಿ ಹೊಳೆದಿದ್ದು ಈ ಸೇವಾ ಉಪಾಯ. ಅನ್ನ ತಂಬ ಸುಲಭವಾಗಿ, ಸರಳವಾಗಿ ಮತ್ತು ಸಹಜವಾಗಿ ಹಂಚಿ ಉಣ್ಣುವಂಥದ್ದು. ಇದನ್ನು ಸಾಧ್ಯವಾಗಿಸಲು ಸಮಾನ ಮನಸ್ಕ ಗೆಳೆಯರು ಸೇರಿ ರಾಮಕೃಷ್ಣ ಸೇವಾ ಪ್ರತಿಷ್ಠಾನ ಸ್ಥಾಪನೆ ಮಾಡಿದ್ದು. ಇದರ ಮೂಲಕವೇ ಅನ್ನಪೂರ್ಣೇಶ್ವರಿ ಪ್ರಸಾದ ನಿಲಯ ಕಾರ್ಯ ನಿರ್ವಹಿಸುತ್ತಿದೆ.

ಈ ಸೇವೆ ಕೇವಲ ಆರು ತಿಂಗಳ ಹಿಂದೆ ಶುರುವಾಗಿದೆ. ಈಗಾಗಲೇ ಒಂದೂವರೆ ಲಕ್ಷದಷ್ಟು ಜನ ಅನ್ನ ಸವಿದಿದ್ದಾರೆ. ಈ ಕಾರ್ಯವನ್ನು ಹಲವರು ಮುಕ್ತ ಕಂಠದಿಂದ ಕೊಂಡಾಡಿದ್ದಾರೆ. ಹಸಿದವರಿಗೆ ಅತ್ಯಂತ ಕಮ್ಮಿ ಬೆಲೆಯಲ್ಲಿ ಹೊಟ್ಟೆ ತುಂಬ ಊಟ ಎನ್ನುವ ಕಲ್ಪನೆಯೇ ಒಂದು ರೋಮಾಂಚನ ಮತ್ತು ಅಚ್ಚರಿ. ಆದರೆ ಇದು ಸಮಾಜದ ಸಹೃದಯರು ಪರಸ್ಪರ ಕೈಜೋಡಿಸಿದ್ದರಿಂದಾಗಿಯೇ ಸಾಧ್ಯವಾಗಿದೆ. ಇಲ್ಲಿಗೆ ಬರುವ ಹಸಿದವರು ಮತ್ತು ಹಸಿದವರು ತಿನ್ನುವುದನ್ನು ನೋಡಿ ಜೀವನದ ಸಾರ್ಥಕತೆಯನ್ನು ಕಾಣಬಯಸುವವರು ತುಂಬ ವಿಶಾಲ ಮನೋಭಾವನೆಯಿಂದ ನೆರವಾಗುತ್ತಿದ್ದಾರೆ. ಇದೇ ಯಶಸ್ಸಿಗೆ